# ಪ್ರಾರ್ಥನೆ

## ಗೀತಾಧ್ಯಾನ

**ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ**
**ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಮ್ ॥**
**ಅದ್ವೈತಾಮೃತವರ್ಷಿಣೀಂ ಭಗವತೀಮ್ ಅಷ್ಟಾದಶಾಧ್ಯಾಯಿನೀಮ್**
**ಅಂಬ ತ್ವಾಮನುಸಂದಧಾಮಿ ಭಗವದ್‌ಗೀತೇ ಭವದ್ವೇಷಿಣೀಮ್ ॥ ೧ ॥**

ಅಮ್ಮ ಭಗವದ್ಗೀತೆ, ಭಗವಂತನಾದ ಶ್ರೀಮನ್ನಾರಾಯಣನಿಂದ ಪಾರ್ಥನಿಗೆ ಸ್ವತಃ ಉಪದೇಶಿಸಲ್ಪಟ್ಟ, ಪ್ರಾಚೀನ ಮಹರ್ಷಿಗಳಾದ ವ್ಯಾಸರಿಂದ ಮಹಾಭಾರತದ ಮಧ್ಯದಲ್ಲಿ ಸೇರಿಸಲ್ಪಟ್ಟ, ಅದ್ವೈತಾಮೃತವನ್ನು ವರ್ಷಿಸುತ್ತಿರುವ, ಸಂಸಾರನಾಶಿನಿಯಾದ, ಅಷ್ಟಾದ್ಯಾಯಗಳನ್ನುಳ್ಳ, ಭಗವತಿಯಾದ ನಿನ್ನನ್ನು ಧ್ಯಾನಿಸುತ್ತೇನೆ.

**ಭೀಷ್ಮದ್ರೋಣತಟಾ ಜಯದ್ರಥಜಲಾ ಗಾಂಧಾರನೀಲೋಪಲಾ**
**ಶಲ್ಯಗ್ರಾಹವತೀ ಕೃಪೇಣ ವಹನೀ ಕರ್ಣೇನ ವೇಲಾಕುಲಾ ।**
**ಅಶ್ವತ್ಥಾಮವಿಕರ್ಣಘೋರಮಕರಾ ದುರ್ಯೋಧನಾವರ್ತಿನೀ**
**ಸೋತ್ತೀರ್ಣಾ ಖಲು ಪಾಂಡವೈ ರಣನದೀ ಕೈವರ್ತಕಃ ಕೇಶವಃ ॥ ೨ ॥**

ಭೀಷ್ಮದ್ರೋಣರು ದಡಗಳಾಗಿಯೂ, ಜಯದ್ರಥನು ಜಲವಾಗಿಯೂ, ಗಾಂಧಾರ ರಾಜನು ಕರಿಯ ಬಂಡೆಯಾಗಿಯೂ, ಶಲ್ಯನು ಮೊಸಳೆಯಾಗಿಯೂ, ಕೃಪನು ಪ್ರವಾಹವಾಗಿಯೂ, ಕರ್ಣನು ಕ್ಷೋಭೆಗೊಂಡ ಅಲೆಯಾಗಿಯೂ, ಅಶ್ವತ್ಥಾಮ-ವಿಕರ್ಣರು ಘೋರ ಮಕರಗಳಾಗಿಯೂ, ದುರ್ಯೋಧನನು ಸುಳಿಯಾಗಿಯೂ ಇರುವ ರಣನದಿಯು ಪಾಂಡವರಿಂದ ದಾಟಲ್ಪಟ್ಟಿತು. ಇದನ್ನು ದಾಟಲು ಶ್ರೀಕೃಷ್ಣನೇ ಅಂಬಿಗನಾಗಿದ್ದನು.

**ಪಾರಾಶರ್ಯವಚಃಸರೋಜಮಮಲಂ ಗೀತಾರ್ಥಗಂಧೋತ್ಕಟಂ**
**ನಾನಾಽಽಖ್ಯಾನಕಕೇಸರಂ ಹರಿಕಥಾಸಂಬೋಧನಾಬೋಧಿತಮ್ ।**
**ಲೋಕೇ ಸಜ್ಜನಷಟ್ಪದೈರಹರಹಃ ಪೇಪೀಯಮಾನಂ ಮುದಾ**
**ಭೂಯಾದ್ಭಾರತಪಂಕಜಂ ಕಲಿಮಲಪ್ರಧ್ವಂಸಿ ನಃ ಶ್ರೇಯಸೇ ॥ ೩ ॥**

ಪರಾಶರಪುತ್ರರಾದ ವ್ಯಾಸರ ವಚನವೆಂಬ ಸರೋವರದಲ್ಲಿ ಹುಟ್ಟಿದ, ನಾನಾಬಗೆಯ ಆಖ್ಯಾನಗಳೆಂಬ ಕೇಸರಗಳಿಂದ ಕೂಡಿದ, ಹರಿಕಥೆಯೆಂಬ ಬೋಧನೆಯಿಂದ ವಿಕಸಿತವಾದ, ಸಜ್ಜನರೆಂಬ ಭ್ರಮರಗಳಿಂದ ಪ್ರತಿದಿನವೂ ಸಂತೋಷದಿಂದ ಉತ್ಕಟ ಪರಿಮಳದಿಂದ ಕೂಡಿರುವ, ನಿರ್ಮಲವಾದ ಮಹಾಭಾರತವೆಂಬ ಪಂಕಜವು ನಮಗೆ ಶ್ರೇಯಸ್ಸನ್ನು ಉಂಟುಮಾಡಲಿ.

— ಗೀತಾ ಧ್ಯಾನಶ್ಲೋಕಗಳಿಂದ